ಸುರಿಯುತ್ತಿತ್ತು. ಟಾಯ್ಲೆಟ್ಟಿಗೆ ಹೋಗಿದ್ದ ಅರಿಹಂತ ಇನ್ನೊಂದು ಎರಡು ನಿಮಿಷ ತಡವಾಗಿ ಬಂದಿದ್ದರೂ ಸಂದೀಪ ಬಕೆಟ್ ಎತ್ತಿಕೊಂಡು ಬಚ್ಚಲುಮನೆಯೊಳಗೆ ಹೋಗಿಬಿಟ್ಟಿರುತ್ತಿದ್ದನೇನೋ. ಆದರೆ ಅವತ್ತು ಸಂದೀಪನ ಗ್ರಹಚಾರ ಸಂಪೂರ್ಣ ಕೆಟ್ಟಿತ್ತು. ಸಂದೀಪ ಬಿಸಿನೀರು ಹಿಡಿದುಕೊಳ್ಳುತ್ತಿರುವುದನ್ನು ನೋಡಿದ ಅರಿಹಂತ ಆ ಕ್ಷಣಕ್ಕೆ ಏನೂ ಪ್ರತಿಕ್ರಿಯೆ ನೀಡಲಿಲ್ಲ. ಸಂಜೆ ಲ್ಯಾಬು ಮುಗಿಸಿಕೊಂಡು ಬರುವಾಗ ಸಾಮಾನ್ಯವಾಗಿ ಕ್ರಿಕೆಟ್‌ನಿಂದ ಆವೃತವಾಗಿರುತ್ತಿದ್ದ ಮೈದಾನ ಖಾಲಿಯಿದ್ದಾಗಲೇ ಸಂದೀಪನಿಗೆ ಏನೋ ಸಮಸ್ಯೆಯಾಗಿದೆ ಎಂದು ಅರಿವಾಯಿತು. ಅವನು ಒಳಗೆ ಹೋಗುವಷ್ಟರಲ್ಲಿ ಅರಿಹಂತನ ಕೋಣೆಯಲ್ಲಿ ಎಲ್ಲರೂ ಗುಂಪು ಸೇರಿದ್ದರು. ಭರತ ಕೋಣೆಯಿಂದ ಹೊರಬಂದು ಆತಂಕದ ದೃಷ್ಟಿಯಲ್ಲಿ ಸಂದೀಪನತ್ತ ನೋಡಿ 'ಡ್ರೆಸ್ ಚೇಂಜ್ ಮಾಡ್ಕೊಂಡ್ ಬರ್ಬೇಕಂತೆ ಮಗಾ' ಎಂದ.

ಜ್ಯೂನಿಯರುಗಳನ್ನು ದ್ವಿತೀಯ ದರ್ಜೆ ನಾಗರಿಕರಂತೆ ನೋಡುತ್ತಾರೆಂದು ಸಂದೀಪ ಎಷ್ಟೇ ಅಲವತ್ತುಕೊಂಡರೂ ಹಾಸ್ಟೆಲ್ಲಿನಲ್ಲಿ ನ್ಯಾಯ ಎನ್ನುವುದು ಸತ್ತಿರಲಿಲ್ಲ ಎನ್ನುವುದಕ್ಕೆ ಈ ಒಲೆ ಉರಿಯ ಪದ್ಧತಿಯೇ ಸಾಕ್ಷಿ. 'ಉಳುವವನೇ ಹೊಲದೊಡೆಯ' ಎನ್ನುವಂತೆ 'ಉರಿಸುವವನೇ ಮೊದಲ ಹನಿಯೊಡೆಯ' ಎಂಬ ವ್ಯವಸ್ಥೆಯನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುತ್ತಿತ್ತು. ಒಲೆ ಉರಿ ಹಾಕಿದ ವ್ಯಕ್ತಿ ಅರ್ಧ ಗಂಟೆ ಬಿಟ್ಟು ನೀರು ಕಾದಿದೆಯಾ ಎಂದು ಪರೀಕ್ಷಿಸಿದ ನಂತರ ಅವನ ಮನಸ್ಸಿಗೆ ಒಪ್ಪಿಗೆಯಾಗುವಷ್ಟು ಬಿಸಿಯಾಗಿದ್ದರೆ ಮೊದಲು ಆತ ಎರಡು ಬಕೆಟ್ ನೀರನ್ನು ಹಿಡಿದುಕೊಳ್ಳಬೇಕಿತ್ತು. ನಂತರ 'ನೀರ್ ಕಾದಿದೆ ಬನ್ರೋ' ಎಂದು ಕಾರಿಡಾರ್ ಮಧ್ಯದಲ್ಲಿ ನಿಂತು ಕೂಗಬೇಕಿತ್ತು. ನಂತರದಲ್ಲಿ ಬರುವ ಎಲ್ಲರಿಗೂ ಕೇವಲ ಒಂದು ಬಕೆಟ್ ಬಿಸಿನೀರನ್ನು ಮಾತ್ರ ಹಿಡಿದುಕೊಳ್ಳಲು ಅನುಮತಿ. ಕೆಲವೊಮ್ಮೆ ಮಧ್ಯಾಹ್ನ, ಸಂಜೆ, ರಾತ್ರಿ ಹೀಗೆಲ್ಲಾ ಸಮಯವಲ್ಲದ ಸಮಯದಲ್ಲಿ ಕೂಡಾ ಅವರಿಗೆ ಸ್ನಾನ ಮಾಡಬೇಕು ಅನ್ನಿಸಿದಾಗ ಸೀನಿಯರುಗಳು ಯಾರಾದರೊಬ್ಬ ಜ್ಯೂನಿಯರನ್ನು ಕರೆದು ಒಲೆ ಉರಿ ಹಾಕಿಸಿಕೊಳ್ಳುತ್ತಿದ್ದರು. ಆಗಲೂ ಕೂಡಾ ಆ ಜ್ಯೂನಿಯರಿಗೆ ಸ್ನಾನ ಮಾಡಲು ಇಷ್ಟವೇ ಇಲ್ಲದಿದ್ದರೂ ಮೊದಲ ಎರಡು ಬಕೆಟ್ ಬಿಸಿನೀರನ್ನು ಅವನೇ ಹಿಡಿದುಕೊಳ್ಳಬೇಕಿತ್ತು. ಅದರಲ್ಲಿ ಕಾಲು ಬೇಕಾದರೂ ತೊಳೆದುಕೊಳ್ಳಲಿ ಅಥವಾ ಸುಮ್ಮನೇ ಚೆಲ್ಲಲಿ, ಒಟ್ಟಿನಲ್ಲಿ ಅವನು ಬಿತ್ತಿದ ಬೆಂಕಿಯ ಬೀಜಕ್ಕೆ ಮೊದಲ ಫಸಲಿನ ಹಕ್ಕು ಅವನದ್ದೇ ಎನ್ನುವುದು ಹಾಸ್ಟೆಲ್ಲಿನ ಪಾರಂಪರಿಕ ನಿಯಮವಾಗಿತ್ತು. ಸಂದೀಪ ಅಂದು ಬೆಳಗ್ಗೆ ಆ ನಿಯಮವನ್ನು ಮುರಿದಿದ್ದ.

'ಅವ್ನು ಹೂಂ ಅಂದ್ರೆ ನೀನ್ ಹೋಗ್ಬಿಡ್ತೀಯೇನೋ ಲೋಫರ್' ಎಂಬ ಅರಿಹಂತನ ಬೈಗುಳಕ್ಕೆ ಸಂದೀಪ, 'ಇಲ್ಲ ಅಣ್ಣಾ... ಲೇಟಾಗಿತ್ತು, ಒಂದೇ ಒಂದ್ ಬಕೆಟ್ ತಗೊಂಡಿದ್ದು ಅಷ್ಟೇ' ಎಂದು ಸಮರ್ಥನೆ ಕೊಡಲು ನೋಡಿದ. 'ಮೊದಲನೇ ದಿನದಿಂದ ನೋಡ್ತಾ ಇದೀನಿ, ತಿಕಗಾಂಚಲಿ ಜಾಸ್ತಿ ಇದೆ ನಿಂಗೆ, ಹಾಸ್ಟೆಲ್ ರೂಲ್ಸು ಅಂದ್ರೆ ಹಾಸ್ಟೆಲ್ ರೂಲ್ಸು, ನಾವ್ ಸೀನಿಯರ್ಸ್ಏ ಬ್ರೇಕ್ ಮಾಡಲ್ಲ ನೀನ್ಯಾವನೋ ತಗಡು' ಎಂದು ಅರಿಹಂತ ಬಹುತೇಕ ಸಂದೀಪನಿಗೆ ಹೊಡೆಯುವಂತೆಯೇ ಎದ್ದು ಬಂದ. ಅಸಹಾಯಕತೆ, ಅವಮಾನಕ್ಕೆ ಸುರಿಸುವ ಕಣ್ಣೀರೆಲ್ಲಾ ಆಗಲೇ ಖಾಲಿಯಾಗಿದ್ದರಿಂದ ಸಂದೀಪ ಸುಮ್ಮನೇ ಹತಾಶನಾಗಿ ನಿಂತಿದ್ದ. ನಂತರ ಇತರ ಸೀನಿಯರುಗಳ ಕಡೆಗೆ ತಿರುಗಿ 'ಇವ್ರಿಗೆಲ್ಲಾ ಸರಿಯಾಗಿ ಬ್ಯಾಕಲ್ಲಿ ಇಡ್ಬೇಕು. ಇಲ್ಲ ಅಂದ್ರೆ ನಮ್ಮನ್ನೇ ತುಳ್ಕೊಂಡ್ ಓಡಾಡ್ತಾರೆ ನನ್ಮಕ್ಳು, ಒಂದ್ ಸೆಮಿಸ್ಟರ್ ಮುಗ್ಸಿದ್ದಕ್ಕೆ ನಾವೂ ಸೀನಿಯರ್ಸು ಅನ್ಕೊಂಬಿಟ್ಟಿದಾರೆ' ಎನ್ನುತ್ತಾ ಎರಡು ಸುತ್ತು ಅತ್ತಿತ್ತ ಓಡಾಡಿದ. ಇವನ ಸಿಟ್ಟಿನ ಪರಿಣಾಮದ ಭೀಕರತೆಯನ್ನು ಕಡಿಮೆ ಮಾಡೋಣ ಎಂದು ಎರಡನೇ ವರ್ಷದ ಶಂಕರ 'ಏಐಟಿ ಸಲ್ಯೂಟ್ ಮಾಡ್ಸಣ' ಎಂದ. ಮತ್ತೊಬ್ಬರು 'ಒಂದ್ ವಾರ ಗಡಿಪಾರ್ ಮಾಡಣ' ಎಂದರು. ಇನ್ಯಾರೋ 'ಈ ಸಲ ದಿನಸಿ ಇವ್ನೊಬ್ನೇ ಒಳಗ್ ತಂದ್ ಹಾಕ್ಲಿ' ಎಂದರು. ಆದರೆ ಅರಿಹಂತನ ಮನಸ್ಸು ಆ ಹೊತ್ತಿಗೆ ಬಯಸುತ್ತಿದ್ದ ಕ್ರೌರ್ಯಕ್ಕೆ ಈ ಯಾವ ಸಲಹೆಗಳೂ ಕನಿಷ್ಠ ಸನಿಹವೂ ಬಂದಿರಲಿಲ್ಲ. ಕೆಟ್ಟದಾಗಿ ಡ್ಯಾನ್ಸ್ ಮಾಡುತ್ತಾ ಎಲ್ಲಾ ಸೀನಿಯರುಗಳಿಗೂ ಸಲ್ಯೂಟ್ ಮಾಡುವುದು, ಒಂದು ವಾರ ಮೇಲಿನ ಮಹಡಿಯ ಮೂಲೆಯ ರೂಮಿನಲ್ಲಿ ಒಬ್ಬನೇ ಉಳಿಯುವುದು, ಐದು ಸುತ್ತು ಓಡಾಡಿ ದಿನಸಿ ತಂದು ಹಾಕುವುದು ಈ ಮೂರರಲ್ಲಿ ಯಾವುದಾದರೂ ಪರವಾಗಿಲ್ಲ, ಹೇಗೋ ದಾಟಿಕೊಂಡುಬಿಡಬಹುದೆಂದು